

(6ನೇ ಪುಟದಿಂದ)

ಮಣ್ಣಿನಲ್ಲಿ ಬೆಳೆಸುವುದರಿಂದ ಬೇರುಗಳು ಹರಡಿ ಬುಡದಲ್ಲಿ ಹಲವಾರು ಕಂದುಗಳು ಹುಟ್ಟಿಕೊಂಡು ತನ್ನಿಂದ ತಾನೆ ಸಸ್ಯಾಭಿವೃದ್ಧಿಹೊಂದುತ್ತವೆ. ಬುಡದಲ್ಲಿ ಹುಟ್ಟಿಕೊಳ್ಳುವ ಮರಿಗಿಡಗಳಿಂದಲೇ ಸಸ್ಯಾಭಿವೃದ್ಧಿ ಮಾಡಬಹುದು. ಕೆಲವೊಂದು ಗಿಡದಲ್ಲಿ ಬಿಟ್ಟ ಹೂವುಗಳೇ ಬಾಗಿ ಅದರಲ್ಲಿಯೇ ಮರಿ ಸಸ್ಯಗಳೂ ಹುಟ್ಟಿಕೊಳ್ಳುವುದಿದೆ ಎನ್ನುತ್ತಾರೆ ಹಲವಾರು ವರ್ಷಗಳಿಂದ ತಮ್ಮ ಅಡಿಕೆ ತೋಟದಲ್ಲಿ ಅಲ್ಫೀನಿಯ ಹೂವುಗಳನ್ನು ಬೆಳೆಸುತ್ತಿರುವ ಶ್ರೀರಾಮ್ ನರ್ಸ್‌ರಿಯ ಕೃಷ್ಣ ಭಟ್.

ನಾಟಿ ಮಾಡಿ ಸುಮಾರು ಆರು ತಿಂಗಳಲ್ಲೇ ಹೂವುಗಳು ಬಿಡಲು ಪ್ರಾರಂಭವಾಗಿ ಮುಂದೆ ಗಿಡಗಳು ಬೆಳೆಯುತ್ತಾ ಹೋದಂತೆ ಸುಮಾರು ಮೂರು ವರ್ಷಗಳಲ್ಲಿಯೇ ಉತ್ತಮ ಗಾತ್ರದ ಹೂವುಗಳನ್ನು ಪಡೆಯಬಹುದು. ಅಡಿಕೆ ತೋಟದಲ್ಲಿ ಬೆಳೆಸುವುದರಿಂದ ಈ ಗಿಡಗಳಿಗಾಗಿ ವಿಶೇಷ ಆರೈಕೆ ಬೇಕಿಲ್ಲ. ಅಡಿಕೆ ಮರಗಳಿಗೆ ಹಾಕಿದ ಗೊಬ್ಬರ ಮತ್ತು ನೀರನ್ನೇ ಬಳಸಿಕೊಂಡು ಚೆನ್ನಾಗಿ ಬೆಳೆಯಬಲ್ಲದು ಎನ್ನುತ್ತಾರೆ ಕೃಷ್ಣಭಟ್. ಹವಳದಂತೆ ಹೊಳೆವ ಸುಂದರ ದಳಗಳನ್ನು ಹೊಂದಿರುವ ಹೂವುಗಳನ್ನು ನೋಡುವಾಗ ಕೃತಕ ಹೂವಿನಂತೆ ಕಂಡುಬಂದರೂ ಕೈಯಲ್ಲಿ ಹಿಡಿದಾಗ ಇದು ಪ್ರಕೃತಿಯ ಅದ್ಭುತ ಕೊಡುಗೆ ಎನ್ನಿಸುತ್ತದೆ.

ಗಿಡದಲ್ಲಿ ಅರಳಿನಿಂತ ಹೂವು ಸುಮಾರು ಮೂರು ತಿಂಗಳು ಬಾಳಿಕೆ ಬಂದರೆ ಗಿಡದಿಂದ ಕಿತ್ತ ಹೂವು ಸಾಮಾನ್ಯವಾಗಿ ಹದಿನೈದರಿಂದ ಇಪ್ಪತ್ತು ದಿವಸಗಳ ಬಾಳಿಕೆ ಬರುತ್ತದೆ. ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಹಾಗೂ ದರವನ್ನು ಹೊಂದಿರುವ ಈ ಹೂವುಗಳು ಗೃಹಾಲಂಕಾರಕ್ಕೆ, ಸಭೆ ಸಮಾರಂಭಗಳಲ್ಲಿ ಹೂವಿನ ಗುಚ್ಛ ತಯಾರಿಸಲು, ಮದುವೆ ಮುಂತಾದ ಶುಭಸಂದರ್ಭಗಳಲ್ಲಿ ಅಲಂಕಾರಿಕವಾಗಿ ಬಳಸಲು ಉಪಯೋಗವಾಗುತ್ತದೆ.

ಸದಾ ಹಸಿರು ಎಲೆಗಳಿಂದ ತುಂಬಿ ಗಿಡಗಳ ಮಧ್ಯೆ ಆಕರ್ಷಕ ಕೆಂಪು ಹೂವುಗಳನ್ನು ಒಳಗೊಂಡ ಗಿಡಗಳನ್ನು ಗಾರ್ಡನ್‌ಗಳಲ್ಲಿ, ಮನೆಯ ಮುಂಭಾಗದಲ್ಲಿ, ರೆಸಾರ್ಟ್‌ಗಳಲ್ಲಿಯೂ ಬೆಳೆಸಿ ಅಂದವನ್ನು ಹೆಚ್ಚಿಸಬಹುದು. ಪುಷ್ಪೋದ್ಯಮ ಇಂದು ಬೃಹತ್ ಕೃಷಿ ಉದ್ದಿಮೆಯಾಗಿ ರೂಪುಗೊಂಡಿದೆ. ಸರಿಯಾದ ಮಾರುಕಟ್ಟೆ, ದರ ಇತ್ಯಾದಿಗಳನ್ನು ಅರಿತರೆ ಕೃಷಿಕರು ರೋಗ ಕೀಟಗಳ ಬಾಧೆಯಿಲ್ಲದ ಮತ್ತು ಹೆಚ್ಚಿನ ಆರೈಕೆಯನ್ನು ಬೇಡದ ಈ ಹೂವಿನ ಗಿಡವನ್ನು ತಮ್ಮ ಅಡಿಕೆ ಅಥವಾ ತೆಂಗಿನತೋಟದಲ್ಲಿ ಬೆಳೆಸಿ ಉಪಕಸುಬಾಗಿ ಲಾಭ ಮಾಡಿಕೊಳ್ಳಬಹುದು.